ವಿಧಾನಗಳನ್ನು ಅನುಸರಿಸಿ ತನ್ನ ಅಧೀನ ನೋಂದಾಯಿತ ಸಂಸ್ಥೆಗಳಿಗೆ ಬಿಡುಗಡೆ ಮಾಡುತ್ತದೆ?

3) ವಕ್ಫ್ ಮಂಡಳಿಯಿಂದ ಅನುದಾನ ಪಡೆಯುತ್ತಿರುವ ನೋಂದಾಯಿತ ಸಂಸ್ಥೆಗಳು ಸದರಿ ಹಣವನ್ನು ಸದುಪಯೋಗ ಪಡಿಸಿಕೊಂಡ ಬಗ್ಗೆ ಕಳೆದ ಒಂದು ವರ್ಷದ ಮಾಹಿತಿಗಳನ್ನು ನೀಡುವುದು.

ಶ್ರೀ ಎ. ಎಂ.ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು):

1) 1998-99 ಸಾಲಿನಲ್ಲಿ ರೂ. 2.70 ಲಕ್ಷಗಳು 1,376 ನೋಂದಾಯಿತ ಸಂಸ್ಥೆಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

2) ಈ ಹಣವನ್ನು ಬಿಡುಗಡೆ ಮಾಡಲು ಗ್ರಾಂಟ್-ಇನ್-ಏಡ್ ಕೋಡ್ ಸರ್ಕಾರದ ಆದೇಶ ಸಂಖ್ಯೆ; ಆರ್‌ಡಿ 139 ಸಿಡಬ್ಲ್ಯೂ ಎಫ್ 77 ದಿನಾಂಕ 23-8-1979 ರ ಪ್ರಕಾರ ಬಿಡುಗಡೆ ಮಾಡಲಾಗುತ್ತದೆ.

3) 1998-99 ರಲ್ಲಿ 870 ನೋಂದಾಯಿತ ಹಾಗೂ ಹಣ ಮಂಜೂರು ಆಗಿರುವ ಸಂಸ್ಥೆಗಳಿಗೆ ರೂ. ೧,೮೮,೦೫,೫೫೦-೦೦ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಹಣವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಿರುತ್ತ ಅದಕ್ಕಾಗಿ ಉಪಯೋಗಿಸಿರುತ್ತಾರೆ.

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ

36 (150)

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುರಗುಂಟಾ-ಬಳ್ಳಾರಿ ರಾಜ್ಯ ಹೆದ್ದಾರಿ ನಂ. 19 ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಇ) ಹಾಗಿದ್ದಲ್ಲಿ ಅಭಿವೃದ್ಧಿ ಕಾರ್ಯವನ್ನು ಎಂದಿನಿಂದ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಹಲವೆಡೆ ರಸ್ತೆ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹೌದು.

ಇ) ವಾರ್ಷಿಕ ನಿರ್ವಹಣೆ ಯೋಜನೇತರ ಅನುದಾನದಲ್ಲಿ ದುರಸ್ತಿ ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ವಿಶ್ವ ಬ್ಯಾಂಕ್ ನೆರವಿನಲ್ಲಿಯೂ ಸಹ ಈ ರಸ್ತೆಯನ್ನು ಅಭಿವೃದ್ಧಿಗೊಳಿಸಲು ಯೋಜಿಸಲಾಗಿದೆ. 2000-2001ನೇ ಸಾಲಿನಲ್ಲಿ ಕಾಮಗಾರಿ ಪ್ರಾರಂಭವಾಗಲಿದೆ.

ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಪರಿವರ್ತನೆ

37 (345)

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ರಾಜ್ಯದಲ್ಲಿರುವ ರಾಜ್ಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸಿ ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸುವ ಉದ್ದೇಶ ಸರ್ಕಾರಕ್ಕೆ ಇದಯೇ?

ಆ) ಹಾಗಿದ್ದಲ್ಲಿ ಯಾವ ಯಾವ ರಾಜ್ಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸಿ ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲಾಗುವುದು?

ಇ) ಈ ಉದ್ದೇಶಕ್ಕೆ ಬೇಕಾಗುವ ಅಂದಾಜು ಹಣ ಎಷ್ಟು ಹಾಗೂ ಈ ಹಣವನ್ನು ಎಲ್ಲಿಂದ ಪಡೆಯಲಾಗುವುದು?

ಈ) ವಿಶ್ವಬ್ಯಾಂಕಿನ ನೆರವಿನಿಂದ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಉ) ಹಾಗಿದ್ದಲ್ಲಿ ಈ ಯೋಜನೆಯಡಿ ಸೇರಿಸಲಾಗುವ ರಾಜ್ಯ ಹೆದ್ದಾರಿಗಳು ಯಾವುವು ಹಾಗೂ ಎಂದಿನಿಂದ ಈ ಯೋಜನೆಯ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸರ್ಕಾರ ಉದ್ದೇಶಿಸಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಹೌದು.